(ಶ್ರೀ ಸಿ. ಆರ್. ರಂಗೇಗೌಡ)

ನಾಯ ಮಾಡುತ್ತಿದ್ದಾರೆ. ಆದ್ದರಿಂದ ಈಗ ಕಪಿಗಳು ವ್ಯವಸಾಯ ಮಾಡುವ ಬೆಳೆಗಳನ್ನು ನಾಶಪಡಿಸುತ್ತಿವೆ. ಇದಕ್ಕೋಸ್ಕರ ಪೂರ್ವದಂತೆ ಕಾಡುಗಳನ್ನು ಬೆಳೆಸಿದರೆ ಕಪಿಗಳು ವಾಸಮಾಡಲು ಅನುಕೂಲವಾಗುತ್ತಿತ್ತಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಹೇಳುವಂತೆ ಕಾಡುಗಳಲ್ಲರುವ ಮರಗಳು ಹೋಗಿ ಅಲ್ಲಿ ರೈತರು ವ್ಯವಸಾಯ ಮಾಡುತ್ತಿದ್ದಾರೆ. ಆದ್ದರಿಂದ ಕಪಿಗಳನ್ನು ನಾಶಮಾಡಲು ರೈತರುಗಳೇ ಏನಾದರೂ ಮಾಡಿ ನಾಶ ಮಾಡಬೇಕು.

ಶ್ರೀ ಅಂದಾನಯ್ಯ.—ಕೋತಿಗಳು ಎಷ್ಟಿವೆ ಎನ್ನುವುದನ್ನೇನಾದರೂ ಸರ್ವೇ ಮಾಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಾಗೆ ನೋಡಿದರೆ ನಮ್ಮ ಜಿಲ್ಲೆಯಾದ ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲೇ ಕೋತಿಗಳು ಹೆಚ್ಚಾಗಿವೆ. ಇಲ್ಲಿ ಶೇಕಡ ಇಪ್ಪತ್ತರಿಂದ ಮೂವ್ವತ್ತರಷ್ಟಿವೆ. ಅದರಿಂದಲೇ ನಮ್ಮ ಕಡೆ ಕಡ್ಲೆಕಾಯಿ ಬೀಜ ಭೂಮಿಗೆ ಹಾಕಿದರೆ ಬೀಜವನ್ನೇ ಅಗೆದು ತಿಂದುಬಿಡುತ್ತವೆ. ಮೊಳಕೆ ಬಂದಾಗ ತಿನ್ನುತ್ತವೆ. ಹೀಗೆ ಕಪಿಗಳ ಕಾಟ ಬಹಳ ಹೆಚ್ಚಾಗಿದೆ. ಇದರಿಂದಾಗಿ ಎಷ್ಟೋ ಕಡೆ ತರಕಾರಿ ಬೆಳೆಯುವ ರೈತರೂ ಕೂಡ ಕೋತಿಗಳ ಕಾಟದಿಂದ ಏನೂ ಬೆಳೆಗಳನ್ನೇ ಮಾಡುತ್ತಿಲ್ಲ.

1-30 P.M.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈ ಕಪಿಗಳ ಹಾವಳಿ ಎಲ್ಲ ಕಡೆಯೂ ಇದೆ. ಕೋಲಾರದಲ್ಲಯೇ ಅಲ್ಲ. ಹಂದಿಗಳೂ ಕೂಡ ಬಿಳೆ ಹಾಳು ಮಾಡುತ್ತವೆ. ಇಲಗಳೂ ಹಾಳು ಮಾಡುತ್ತವೆ. ಹೆಚ್ಚಿಗೆ ಬಂದೂಕು ಲೈಸೆನ್ಸ್ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಇಲಗಳಿಗೆ ಕೆಲವು ಔಷಧಿಗಳನ್ನು ಕಂಡುಹಿಡಿದಿದ್ದಾರೆ, ಅವುಗಳನ್ನು ರಾತ್ರಿ ಚೈಮಿನಲ್ಲಿ ಸ್ಪ್ರೇ ಮಾಡುವ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—ಇಲಗಳ ಬಗ್ಗೆ ಸರ್ಕಾರದ ಅಗ್ರಿಕಲ್‌ಚರಲ್ ಇಲಾಖೆ ಕಾರ್ಯಕ್ರಮ ತೆಗೆದುಕೊಂಡಿದೆ, ಅದಕ್ಕೆ ಒಂದು ಪ್ರೊಸೀಜರ್ ಇದೆ. ಆದರೆ ಕಪಿಗಳನ್ನು ಸಾಯಿಸುವುದಕ್ಕೆ ಜನ ಬಹಳ ಭಯಪಡುತ್ತಾರೆ. ಸರ್ಕಾರದವರು ಅವುಗಳನ್ನು ಕೊಂದರೆ ರೈತರು ಬಹಳ ವಿರೋಧ ಮಾಡುತ್ತಾರೆ. ಆದರೆ ರೈತರಿಗೂ ಅವುಗಳಿಂದ ಬೇಜಾರಾಗುವ ಕಾಲ ಬಂದಿದೆ. ನಿರ್ದಾಕ್ಷಿಣ್ಯವಾಗಿ ಕಪಿಗಳನ್ನು ಕೊಲ್ಲಲೇ ಬೇಕಾಗುತ್ತದೆ.

Mr. SPEAKER.—Question No. 169. The Hon'ble Member is not in his seat.

Next question No. 185.

Grants of Darkhast Lands in Puttur and Belthangadi Taluks since 1960.

*Q.—185. Sri S. SUBBAYYA NAIK (Sullia).—

Will the Government be pleased to state:—

(*a*) the acreage of darkhast lands granted to tenants in Puttur and Belthangady taluks since 1960 ;

(*b*) out of the above recipients the number of persons who are landless ;

(*c*) the number of darkhast applications pending for distribution of lands among the above applications since 1960 ;

(*d*) the reasons for not sanctioning the lands for the pending applicants (information be giving firkawar) ?

A.—Sri M. V. KRISHNAPPA (Minister for Revenue).—

Name of the Taluk	*Name of the Firka*	*Extent*
		As. Cs.
(*a*) Belthangady	Belthangady	468-80
	Kokkada	478-23
	Venoor	314-63
Puttur	Puttur	1,128-00
	Uppinangady	1,148 00
	Sullia	578-00
	Panja	560-20
		No. of persons
(*b*) Belthangady Taluk.	Belthangady	187
	Kokkada	204
	Venoor	201
Puttur Taluk	Puttur	540
	Uppinangady	592
	Sullia	286
	Panja	280
Name of the Taluk	*Name of the Firka*	*No. of persons*
(*c*) Belthangady Taluk	Belthangady	136
	Kokkada	156
	Venoor	113
Puttur Taluk	Puttur	197
	Uppinangady	198
	Sullia	101
	Panja	55

(*d*) As the Forest Department and the Village Panchayats have to be consulted in all assignments cases, the grant of lands takes time.

ಶ್ರೀ ಎಸ್. ಸುಬ್ಬಯ್ಯನಾಯಕ್.—ವರ್ಗದಾರರಲ್ಲಿ ಎಷ್ಟು ಜನಕ್ಕೆ ಕೊಟ್ಟಿದ್ದೀರಿ ದರಖಾನ್ತು ?

ಶ್ರೀ ಎಂ. ವಿ. ಕೃಷ್ಣಪ್ಪ.—"Out of the above recipients, the number of persons who are landless", ಎಂತ ಕೇಳಿದ್ದಕ್ಕೆ ಡೀಟೇಲ್ಸ್ ಕೊಟ್ಟಿದೆ. First figures, second figures

ಬಿಟ್ಟು ಮಿಕ್ಕವರೆಲ್ಲಾ ಭೂಮಿ ಇರುವವರೇ ನರ್‌ಪ್ಲಸ್ ಲ್ಯಾಂಡ್ ಇಲ್ಲದೆ ಇರುವವರಿಗೆ ಕೊಡುತ್ತೇವೆ.

Sri G. V. GOWDA.—You have not given the number of persons who are insufficient holders.

Mr. SPEAKER.—He has not asked that question.

ಶ್ರೀ ಸಿ. ಆರ್. ರಂಗೇಗೌಡ.—ಫಾರೆಸ್ಟ್ ಇರಾಖೆ ಮತ್ತು ಗ್ರಾಮ ಪಂಚಾಯತಿಗಳು ಅನುಮತಿ ಪಡೆದ ಮೇಲೆಯೂ ವಿರೋಧಾರಿ ಗಳಿದಿರುವ ಅರ್ಜಿಗಳಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಫಾರೆಸ್ಟ್ ಇಲಾಖೆಯವರ ಅನುಮತಿ ಕೊಟ್ಟ ತಕ್ಷಣ ನಮ್ಮ ಇಲಾಖೆಯವರು ಇತ್ಯರ್ಥ ಮಾಡುತ್ತಾರೆ. ಅನುಮತಿ ಬರುವುದನ್ನೇ ನಮ್ಮ ಇಲಾಖೆಯವರು ಕಾಯುತ್ತಿರುತ್ತಾರೆ. ಬಂದ ತಕ್ಷಣ ಕೊಟ್ಟು ಬಿಡುತ್ತಾರೆ. ನೀವು ಹೇಳಿದಂಥ ಕೇಸುಗಳಿದ್ದರೆ, ನನ್ನ ಗಮನಕ್ಕೆ ತನ್ನಿ.

ಶ್ರೀ ಸಿ. ಆರ್. ರಂಗೇಗೌಡ.—15-20 ವರ್ಷಗಳ ಹಿಂದೆ ಆಜ್ಞೆ ಮಾಡಿ ಇನ್ನೂ ದರಖಾಸ್ತು ಕೊಡದಿರುವುದಕ್ಕೆ ಕಾರಣಗಳೇನು ? ಹಾಗಿದ್ದೂ ಗ್ರಾಮಪಂಚಾಯಿತಿಗಳೂ, ಅರಣ್ಯ ಇಲಾಖೆಯವರೂ ಕಾರಣ ಎಂದು ಹೇಗೆ ಹೇಳಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—೨-೩ ಕಾರಣ ಹೇಳಿದೆ. ಫಾರೆಸ್ಟ್ ಇಲಾಖೆಯವರಿಗೆ ಬೇಕಾದ ಜಮೀನನ್ನು ಬಿಟ್ಟುಕೊಡುವುದಕ್ಕೆ ಇಷ್ಟವಿರುವುದಿಲ್ಲ. ವಿಲೇಜ್ ಪಂಚಾಯಿತಿಗಳನ್ನು ಕನ್‌ಸರ್ಟ್ ಮಾಡಿ ಅವರ ಅಭಿಪ್ರಾಯವನ್ನು ಪಡೆಯಬೇಕು. ಇದರಲ್ಲಿ ಇದು ಎಲ್ಲಾ ಇರುವುದರಿಂದ ನಿಧಾನವಾಗಲಿಕ್ಕೆ ಕಾರಣವಾಗಿದೆ.

ಶ್ರೀ ಸಿ. ಆರ್. ರಂಗೇಗೌಡ.—ಅರಣ್ಯವಿಲ್ಲದ ಕಡೆಯೂ ಅರಣ್ಯ ಶಾಖೆಯನ್ನು ಕೇಳಬೇಕೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ಭಾಗದಲ್ಲಿ ಅರಣ್ಯವಿರುತ್ತದೆ. ಇನ್ನೂ ಕೆಲವು ಕಡೆ ಅಫಾರೆಸ್ಟೇಷನ್ ಮಾಡಬೇಕಾಗುತ್ತದೆ. ಆದ್ದರಿಂದ ಫಾರೆಸ್ಟ್ ಇರಾಖೆ ಕನ್‌ಸರ್ಟ್ ಮಾಡುವ ಪದ್ಧತಿ ಬಂದಿದೆ.

ಶ್ರೀ ಕೆ. ಲಕ್ಕಪ್ಪ.—ಮಂತ್ರಿಗಳು ನೇರವಾಗಿ 50-100 ಎಕರೆ ಜಮೀನನ್ನು ಉಳಿಮೆ ಮಾಡುವುದಕ್ಕೆ ಕೊಡುತ್ತಾ ಇರುವುದು ಗಮನಕ್ಕೆ ಬಂದಿದೆಯಲ್ಲಾ.

Mr. SPEAKER.—I disallow this supplementary. Which Minister are you having in mind ?

ಶ್ರೀ ಕೆ. ಲಕ್ಕಪ್ಪ.—ಚಿಕ್ಕನಾಯಕನಹಳ್ಳಿಯಲ್ಲಿ 50-100 ಎಕರೆ ಕೊಟ್ಟಿದ್ದಾರೆ.

Mr. SPEAKER.—The whole question has been disallowed by me. I cannot understand this. Chikkanayakanahalli is not in Puttur Taluk. Chikkanayakanahalli will have to be located in Puttur Taluk and then you have to ask the supplementary.

Sri SANJEEVANATH AIKALA.-What steps have the Government taken regarding the occupation of certain forest lands by the landless, for eviction ?

Sri M. V. KRISHNAPPA.—The Government is taking all action to see that they are evicted and correspondence is going on in that connection.

ಶ್ರೀ ಎನ್. ನುಚ್ಚಯ್ಯನಾಯಕ್.—ಬೆಲ್ತಂಗಡಿ ಮತ್ತು ಪುತ್ತೂರು ತಾಲ್ಲೂಕುಗಳಲ್ಲಿ ದರಖಾಸ್ತು ಕೊಡಲಿಕ್ಕೆ ಇಂತಿಷ್ಟೇ ಸ್ಥಳ ಕೊಡಲಿಕ್ಕೆ ಇದೆ ಎಂದು ಸರ್ಕಾರದ ಲೆಕ್ಕ ಇದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಲೆಕ್ಕ ನನ್ನ ಹತ್ತಿರ ಇಲ್ಲ. ಹಿಂದೆ ಉತ್ತರ ಕೊಡುತ್ತಾ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಲ್ಯಾಂಡ್ ಅವೇಲಬಲ್ ಇದೆಯೆನ್ನುವುದನ್ನು ಕೊಟ್ಟಿದೆ. ಈಗ ಎಮರ್ಜೆನ್ಸಿ ಸಿಚುಯೇಷನ್ ಇರುವುದರಿಂದ ಹೆಚ್ಚು ಆಹಾರ ಬೆಳೆಯಲು ಎಲ್ಲಾ ತಾಲ್ಲೂಕುಗಳಲ್ಲಿಯೂ ಲ್ಯಾಂಡ್ಸ್ ಕೊಡಬೇಕೆಂದು ಸಾಗುವಳಿ ಚೀಟಿ ತಯಾರಾಗುತ್ತಿದೆ. ಚಾಮರಾಜನಗರ ತಾಲ್ಲೂಕಿನಲ್ಲಿಯೇ 3 ಸಾವಿರ ಎಕರೆ ಕೊಡಲು ಸಾಗುವಳಿ ಚೀಟಿ ತಯಾರು ಮಾಡಿ ಇಟ್ಟಿದ್ದಾರೆ, ನಾನು ಹೋಗಿ ಹಂಚುತ್ತೇನೆ. ಅದೇ ರೀತಿ ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲಿಯೂ ಅವೇಲಬಲ್ ಲ್ಯಾಂಡ್‌ನಲ್ಲಿ 2-2 ಎಕರೆಗೆ ಸಾಗುವಳಿ ಚೀಟಿ ಮಾಡಿಡಬೇಕೆಂದು ಡಿ.ಸಿ.ಗಳಿಗೆ ಆಜ್ಞೆ ಮಾಡಿದೆನೆ. ಒಂದು ಕಡೆ ಭೂದಾನ ಮಾಡಿದ ಹಾಗೆ ದರಖಾಸ್ತು ದಾನ ಮಾಡುವುದಕ್ಕೆ ನಾಳೆ ಭಾನುವಾರದಿಂದ ಚಳುವಳಿ ಪ್ರಾರಂಭ ಮಾಡುತ್ತೇವೆ. ೩ ಸಾವಿರ ಎಕರೆಯನ್ನು ಚಾಮರಾಜನಗರಕ್ಕೆ ಕೊಡುತ್ತೇವೆ.

Sri SANJEEVANATHA IKALA.—Is not the decision of the Hon'ble Minister to evict these families quite contrary to the assurance given by the previous Revenue Minister ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾರ್ಮಲ್ಲಾಗಿ ಎವಿಕ್ಷನ್ ಮಾಡುತ್ತೇವೆ.

Those who are entitled to get it will get it and there is no question of denial.

Sri SANJEEVANATHA IKALA.—But what about the assurance given by the previous Minister ?

Mr. SPEAKER.—It has been answered. In case where they deserve to get, they will get it and where they will have to be evicted, they will be evicted.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರೈತರು ಕಷ್ಟಪಟ್ಟು ಮಾಡಿಕೊಂಡಿರುತ್ತಾರೆ. ರೆಗ್ಯುಲರೈಸ್ ಮಾಡಿ ಬಿಡೋಣವೆಂದು ಹಿಂದಿನವರು ಹೇಳಿದ್ದರು. ಈಗ ತಾವು ಎವಿಕ್ಷನ್ ಮಾಡಬೇಕೆಂದು ಹೇಳುತ್ತೀರ. Therefore, may I know what is the definite stand taken in this regard by the Government.

ಶ್ರೀ ಎಂ. ವಿ. ಕೃಷ್ಣಪ್ಪ.—'Definite stand' ಅಂದರೆ, unauthorised occupants, eviction ಮಾಡುವುದು ಸರ್ಕಾರದ ಕರ್ತವ್ಯ. They should not do so. It is disobedience of law. But there are some genuine cases. ಕಲ್ಪ ವೇಷನ್ ಮಾಡಿಕೊಂಡು ಬಂದಿರುತ್ತಾರೆ ಅಂಥವರಿಗೆ ಕೊಡಬೇಕು. ಹಿಂದೆ ಒಬ್ಬರು ಮಿನಿಸ್ಟರು ಭಾಷಣ ಮಾಡುತ್ತಾ, ಹಾಗೆ ಭರವಸೆ ಕೊಟ್ಟಿದ್ದರು. ಅನೇಕ ಕಡೆಗಳಲ್ಲಿ mass-scale unauthorised cultivation ನಡೆಯುತ್ತಾ ಇರುವುದರಿಂದ, ಮೊದಲು ಎವಿಕ್ಷನ್ ನಡೆಯಬೇಕು. They must first be

(ಶ್ರೀ ಎಂ. ವಿ. ಕೃಷ್ಣಪ್ಪ)

evicted and then we may grant land to them.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಿಂದಿನ ಮಂತ್ರಿಗಳು ಭಾಷಣ ಮಾಡುತ್ತಾ, ತಪ್ಪಾಗಿ ತಿಳಿಯುವಂತೆ ಕೊಟ್ಟಿದ್ದಕ್ಕೆ ಮಂತ್ರಿಗಳೇ ಕೊಡಬೇಕಲ್ಲವೆ? ಒಬ್ಬ ಮಂತ್ರಿಗಳು ಹೇಳಿದ್ದನ್ನು ಇನ್ನೊಬ್ಬ ಮಂತ್ರಿಗಳು ಬದಲಾಯಿಸುವುದು ಸರಿಯೇ?

(*No answer*)

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಹೆಚ್ಚು ಆಹಾರ ಬೆಳೆಯುವ ಕಾರ್ಯಕ್ರಮದಲ್ಲಿ ಭೂಮಿ ಕೊಡುವಾಗ, ರೈತರಿಗೆ ಪ್ರಾಶಸ್ತ್ಯವನ್ನು ಕೊಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಪೂರ್ತಿ ರೂಲ್ಸ್ ಪ್ರಕಾರ 2-2 ಎಕರೆ ಸಾಗುವಳಿ ಚೀಟಿ ಕೊಡಲಾಗುತ್ತದೆ. ಸಾಮಾನ್ಯವಾಗಿ ಬಡವರಿಗೆ ಕೊಡಬೇಕೆನ್ನುವುದೇ ಅರ್ಥ. ಸಾಧ್ಯವಾದಷ್ಟು ಭೂಮಿ ಇಲ್ಲದವರಿಗೇ ಕೊಡಬೇಕೆಂದು ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇನೆ.

ಶ್ರೀ ಎಸ್. ಎಂ. ಕೃಷ್ಣ.—ಭೂಮಿಯನ್ನು ಕೊಡುವುದಕ್ಕೆ ಹೊರಟಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಹಾಗೆ ಭೂಮಿಯನ್ನು ಕೊಡುವಾಗ ಸೈನ್ಯಕ್ಕೆ ಸೇರುತ್ತ, ಇರತಕ್ಕ ಜನಗಳಿಗೆ ಪ್ರಾಧಾನ್ಯತೆ ಕೊಡುವುದು ಸರ್ಕಾರದ ಆಲೋಚನೆಯಲ್ಲಿದಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಲ್ಯಾಂಡ್ ಗ್ರಾಂಟ್ ರೂಲ್ಸ್ ಮಾಡುತ್ತಾ ಇದ್ದೇವೆ. ಈಗಿನ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಫಸ್ಟ್ ಪ್ರಯಾರಿಟಿ ಎಕ್ಸ್ ಪ್ರೋಪ್ರಿಯೇಟೆಡ್ ರಯಟ್ಸ್ ಬರುತ್ತಾರೆ. ಎರಡನೆಯದು ಲ್ಯಾಂಡ್‌ಲೆಸ್ ಹರಿಜನಗಳು ಬರುತ್ತಾರೆ. ಮೂರನೆಯದು ಪೊಲೀಟಿಕಲ್ ಸಫರರ್ಸ್ ಬರುತ್ತಾರೆ. ನಾಲ್ಕನೆಯದು ಸೋಲ್ಜರ್ಸ್ ಬರುತ್ತಾರೆ. But the soldiers will get hereafter first preference.That we are doing now.Soldiers who are taking part in the present struggle will get this preference because there is a lot of applications from old soldiers and ex-soldiers.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಬೆಳ್ತಂಗಡಿ, ಪುತ್ತೂರು ತಾಲ್ಲೂಕುಗಳು ಮಲೆನಾಡು ಪ್ರದೇಶ, ಫಾರೆಸ್ಟ್ ಏರಿಯ. ಅಲ್ಲಿ ಹೆಚ್ಚು ಫಾರೆಸ್ಟ್ ಇರುವ ಜಾಗದಲ್ಲಿ 60 ವರ್ಷ, 90 ವರ್ಷ ಜಮೀನನ್ನು ಲೀಜಿಗೆ ತೆಗೆದುಕೊಂಡು ಮಾಡುವುದು ಇತ್ತು. ಅದ್ದರಿಂದ ಈಗಲೂ ಸಹ ಅಲ್ಲಿ ಜಮೀನನ್ನು ಲೀಜಿಗೆ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ಲೀಜಿಗೂ ಕೊಡಬೇಕಾಗುತ್ತದೆ. ಕೆಲವು ಪ್ರದೇಶದಲ್ಲಿ ಪೂರ್ತಿ ಕೊಡಬೇಕಾಗುತ್ತದೆ.

ಶ್ರೀ ಟಿ.ಡಿ. ದೇವೇಂದ್ರಪ್ಪ.—ಮಾನ್ಯ ಮಂತ್ರಿಗಳು ಅಪ್ಪಣೆಕೊಡಿಸಿದರು. ಭೂಮಿಯನ್ನು ಹಂಚಿಕೆ ಮಾಡುವುದಕ್ಕೆ ಹೊರಡುತ್ತೇವೆಂದು. ಹಾಗಾದರೆ ಎಷ್ಟು ದಿವಸಗಳಲ್ಲಿ ಈ ಜಮೀನ್ ಹಂಚಿಕೆಯು ವಿಚಾರ ಪೂರ್ತಿಯಾಗುತ್ತದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮ ಲೆಕ್ಕದ ಪ್ರಕಾರ ಆರು ಲಕ್ಷ ಎಕರೆಯನ್ನು ವ್ಯವಸಾಯಕ್ಕೆ ತರಬಹುದು ಎಂದು ಡೆಪ್ಯುಟಿ ಕಮೀಷನರು ಹೇಳಿದ್ದಾರೆ. ಅನ್ ಆಥರೈಜ್ಡ್ ಕಲ್ಟಿವೇಷನ್ ಬೇಕಾದಷ್ಟು ಇರುತ್ತದೆ. ಜಮೀನನ್ನು ಹಂಚುವ ಕೆಲಸವನ್ನು ಈಗ ಪ್ರಾರಂಭ ಮಾಡಿದರೆ ಉಳುವೆ ಕಾಲಕ್ಕೆ ಎಂದರೆ ಏಪ್ರಿಲ್ ತಿಂಗಳ ಹೊತ್ತಿಗೆ ಸಾಧ್ಯವಾದಷ್ಟು ಭೂಮಿಯನ್ನು ಪ್ರತಿಯೊಂದು ಡಿಸ್ಟ್ರಿಕ್ಟ್‌ಗೂ ಎರಡು ಮೂರು ಸಾವಿರ ಎಕರೆಯ ಪ್ರಕಾರ ಕೊಡಲೇಬೇಕೆಂದು ನಿರ್ಧಾರ ಮಾಡುತ್ತಾ ಇದ್ದೇವೆ.

ಶ್ರೀ ಕೆ. ಎನ್. ನೂರ್ಯನಾರಾಯಣರಾವ್.—ತೀವ್ರ ಕ್ರಮ ಕೈಗೊಂಡು ಜಮೀನನ್ನು ಹಂಚಿಕೊಂಡು ಹೋಗುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಹಾಗಾದರೆ ಈಗ ಹೊಸದಾಗಿ ಡಿಫೆನ್ಸ್ ಸರ್ವೀಸಿಗೆ ಸೇರುವವರಿಗೆ ಜಮೀನು ಉಳಿಯುವುದು ಎಲ್ಲಿ ಬಂತು?

ಶ್ರೀ ಎಂ. ವಿ. ಕೃಷ್ಣಪ್ಪ.—ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಕಲವು ಪ್ರದೇಶದಲ್ಲಿ ರಿಜರ್ವೇಷನ್ ಬರುತ್ತದೆ.

ಶ್ರೀ ಅಂದಾನಯ್ಯ.—ಚಾಮರಾಜನಗರ ತಾಲ್ಲೂಕಿನಲ್ಲಿ 3 ಲಕ್ಷ ಎಕರೆ ಜಮೀನನ್ನು ಕೊಡುತ್ತೇವೆಂದು ಹೇಳಿದ್ದೀರಿ. ಅದು ಅರಣ್ಯ ಇಲಾಖೆಗೆ ಸೇರಿದೆಯೇ ಅಥವಾ ಗೋಮಾಳಕ್ಕೆ ಸೇರಿದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.— ಅದೃಷ್ಟವಶಾತ್ ನಾನು ಅಲ್ಲಿಗೆ ಹೋದಾಗ ನೋಡಿದೆ. ಅರಣ್ಯ ಇಲಾಖೆಗೆ ಬರೆದರೆ ಅದು ನಮಗೆ ಸೇರಿಲ್ಲವೆಂದು ಹೇಳುತ್ತಾರೆ, ರೇವಿನ್ಯೂ ಇಲಾಖೆಯವರಿಗೆ ಬರೆದರೆ ಅದು ನಮ್ಮದಲ್ಲ ಎಂದು ಇವರು ಕೇಳುತ್ತಾರೆ. ಈಗ 15 ವರ್ಷಗಳಿಂದ ಇದೇ ರೀತಿ ಬರುತ್ತದೆ. Nobody was collecting because it is not authorised cultivation.

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮಿನಾಗಾರಿಕೆ ಶಾಖೆಗಳ ಮಂತ್ರಿಗಳು).—ಆ ಜಮೀನು ಅರಣ್ಯ ಇಲಾಖೆಗೆ ಸೇರಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಜಮೀನು ನಮ್ಮ ರೇವಿನ್ಯೂ ಇಲಾಖೆಗೆ ಸೇರಿಲ್ಲ.

Mr. SPEAKER.—It belongs to them collectively.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬಗರ್ ಹುಕುಮ್ ಸಾಗು ಮಾಡಿದ ಜನಗಳನ್ನು ಓಡಿಸಿಬಿಟ್ಟು ಅವರಿಗೆ ಕ್ರಮಬದ್ಧವಾಗಿ ಕೊಡಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆಯೆಂದು ಮಾನ್ಯ ಮಂತ್ರಿಗಳು ಹೇಳಿದರು. ಸರ್ಕಾರ ಈ ಪಾಲಿಸಿಯನ್ನು ತೀರ್ಮಾನ ಮಾಡಿದೆಯೇ?

Sri M.V. KRISHNAPPA.—If they are eligible under the rules those who are at present cultivating them also will be given.

ಶ್ರೀ ಎಚ್. ಆರ್. ಕೇಶವಮೂರ್ತಿ.—ಫಲವತ್ತಾದ ಜಮೀನುಗಳನ್ನೆಲ್ಲಾ ಬೇರೆಯವರಿಗೆ ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ದೇಶಕ್ಕಾಗಿ ಹೋರಾಡುತ್ತ ಪ್ರಾಣತ್ಯಾಗ ಮಾಡುವ ಸಿಪಾಯಿಗಳಿಗೆ ಜಮೀನನ್ನ ಉಳಿಸುವುದು ಒಳ್ಳೆಯದಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.— ಲ್ಯಾಂಡ್ ಗ್ರಾಂಟ್ ಮಾಡುವಾಗ ಇಷ್ಟು ಪರ್ಸೆಂಟೇಜ್ ರಿಜರ್ವ್ ಮಾಡಬೇಕೆಂದು ಇಟ್ಟಿದ್ದೇವೆ. ಅದರಲ್ಲಿ ಸಿಪಾಯಿಗಳಿಗೂ ರಿಜರ್ವ್ ಮಾಡಬೇಕೆಂದು ರೂಲ್ಸ್ ನಲ್ಲಿ ಸೇರಿಸಿದ್ದೇವೆ.

ಶ್ರೀ ಎಸ್. ಶಿವಪ್ಪ.—ಈಗತಾನೆ ಮಾನ್ಯ ಮಂತ್ರಿಗಳು ಹೇಳಿದರು, ಕೆಲವು ಮಂತ್ರಿಗಳು ಹೋಗಿ ಹೇಳಿಬಿಟ್ಟು ಅನ್‌ಆಥರೈಜ್ಡ್ ಕಲ್ಟಿವೇಷನ್ ಮಾಡಿಬಿಟ್ಟಿದಾರೆ ಅಂಥಾದ್ದನ್ನು ರೆಗ್ಯುಲರೈಜ್ ಮಾಡುತ್ತೇವೆಂದು ಹೇಳಿದರು. ಅದು ನಿಜವೇ? ಹಾಗೆ ಮಂತ್ರಿಗಳು ಹೇಳಿ ಮಾಡಿದಂತ ಅನ್‌ಆಥರೈಜ್ಡ್ ಕಲ್ಟಿವೇಷನ್ ಅನ್ನು ರೆಗ್ಯುಲರೈಜ್ ಮಾಡುತ್ತೇವೆಂದು ಹೇಳಿದ ಪಕ್ಷದಲ್ಲಿ ಹಾಗೆಯೇ ಬೇರೆ ಪುಡಾರಿಗಳು ಹೇಳಿ ಅನ್‌ಆಥರೈಜ್ಡ್

ಕಲ್ಪವೇಷನ್ ಮಾಡಿಸಿದ ಜಮೀನನ್ನು ರೆಗ್ಯುಲರೈಜ್ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಂತ್ರಿಗಳು ಹೇಳಿ ಅನ್‌ಅಥರೈಜ್ಡ್ ಕಲ್ಪವೇಷನ್ ಮಾಡಿಸಿದ್ದಾರೆಂದು ನಾನು ಹೇಳಿಲ್ಲ, ಯಾರು ಯಾರು ಮಂತ್ರಿಗಳ ಭಾಷಣವನ್ನು ಕೇಳಿ ಜಮೀನನ್ನು ಉತ್ತುಕೊಂಡು ಎಕ್ಸ್‌ಟೆನ್‌ಸೀವ್ ಅನ್‌ಅಥರೈಜ್ಡ್ ಕಲ್ಪವೇಷನ್ ಮಾಡಿದ್ದಾರೋ ಅಂಥ ಜಮೀನುಗಳನ್ನೆಲ್ಲಾ ಎವಿಕ್ಟ್ ಮಾಡಿಸಿ If they are eligible ಆ ಜಮೀನನ್ನು ಅವರಿಗೆ ಕೊಡುತ್ತೇವೆ.

ಶ್ರೀ ಎಸ್. ಶಿವಪ್ಪ.— ಮಂತ್ರಿಗಳು ಹೇಳಿದ ರೀತಿಯಲ್ಲಿ ಅನ್‌ಅಥರೈಜ್ಡ್ ಕಲ್ಪವೇಷನ್ ಮಾಡಿದ್ದರೆ ಅಂಥಾದ್ದನ್ನು ರೆಗ್ಯುಲರೈಸ್ ಮಾಡುತ್ತೇವೆಂದು ಹೇಳಿದಿರಿ, ಅದೇ ರೀತಿ ಬೇರೆಯವರು ಅನ್‌ಅಥರೈಜ್ಡ್ ಕಲ್ಪವೇಷನ್ ಮಾಡಿದಾರೆ ಅದನ್ನು ರೆಗ್ಯುಲರೈಜ್ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಪ್ಣಪ್ಪ.—ಮಂತ್ರಿಗಳು ಹೇಳಿದ್ದೂ ರೆಗ್ಯುಲರೈಜ್ ಮಾಡುತ್ತೇವೆ. ಮಂತ್ರಿಗಳು ಹೇಳಿದ್ದನ್ನೂ ರೆಗ್ಯುಲರೈಜ್ ಮಾಡುತ್ತೇವೆ.

Sri J.P SARVESH.-The standing crop cultivated by Harijans unauthorisedly are being grazed by the villagers. Will the Government issue orders under the present prevailing conditions that such crops should not be grazed ?

Sri M.V. KRISHNAPPA.-If the Harijans are cultivating land under the rules they get the benefit because about 10 per cent will have to be reserved for them.

Sri J. P. SARVESH.—The standing crops are being grazed by the villagers. That should be prevented.

ಶ್ರೀ ಟಿ. ಡಿ. ದೇವೇಂದ್ರಪ್ಪ.— ಫಾರೆಸ್ಟಿಗೆ ಸಂಬಂಧಪಟ್ಟ ಅನೇಕ ಜಮೀನುಗಳು ಫಾರೆಸ್ಟಿನಿಂದ ರಿಲೀಜ್ ಆಗದೆ ಇದರೂ ಅವುಗಳನ್ನು ಜನಗಳು ಉತ್ತು ಕೊಂಡಿರತಕ್ಕ ಅನೇಕ ಇವೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಅಷ್ಟೂ ಜಮೀನನ್ನು ಹಂಚತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆಂದು ಮಾನ್ಯಮಂತ್ರಿಗಳು ಹೇಳಿದ್ದಾರೆ. ಜಮೀನು ಫಾರೆಸ್ಟಿನಿಂದ ರಿಲೀಜ್ ಆಗದೆ ಇದ್ದರೆ ಅದರಿಂದ ತೊಂದರೆಯಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜಮೀನು ಸಾಲವೆ ಇರುವ ಬಡವರು ಬಹಳ ಜನ ಇದ್ದಾರೆ. ಹರಿಜನಗಳು ಅನೇಕ ಕಡೆ ಸ್ಮಶಾನಗಳನ್ನು ಉತ್ತುಬಿಟ್ಟಿದ್ದಾರೆ. ಅನೇಕ ಕಡೆ ರೈತರು ಅರ್ಜಿಗಳನ್ನು ಕೊಟ್ಟಿದ್ದಾರೆ. ಕೆರೆಗಳು, ಕುಂಟೆಗಳು, ಮತ್ತು ಕಟ್ಟೆಗಳು ಇವುಗಳನ್ನೆಲ್ಲಾ ಉತ್ತುಕೊಂಡುಬಿಟ್ಟಿದ್ದಾರೆ. ಅದನ್ನು ಕಾನೂನು ರೀತಿಯಲ್ಲಿ ಪರ್ಯಾಲೋಚನೆ ಮಾಡಿ ಎಲ್ಲೆಲ್ಲ ನ್ಯಾಯವಾಗಿ ಅವರಿಗೆ ಕೊಡಬಹುದೋ ಅದನ್ನು ಕೊಡಬೇಕು.

Sri J. P. SARVESH.—My question was that standing crops which are unauthorisedly cultivated are being grazed in certain villages and such a thing should be stopped under the emergency conditions. Will Government issue such orders ?

Sri M. V. KRISHNAPPA.— If some Harijans have unauthorisedly cultivated and if villagers are grazing them, they are punishable The Government is there to punish unauthcrised people and not the villagers.

ಶ್ರೀ ಎಸ್. ಸುಬ್ಬಯ್ಯ ನಾಯಕ್.— ಹೆಚ್ಚು ಆಕಾರವನ್ನು ಬೆಳೆಯುವ ಬಗ್ಗೆ ದರಖಾಸ್ತು ಭೂಮಿಯನ್ನು ಹಂಚುತ್ತೇವೆಂದು ಹೇಳಿದಿರಿ, ಹಾಗೆ ಭೂಮಿಯನ್ನು ಹಂಚುವಾಗ ಏನಾದರೂ ಪರಶ್ಯುಗಳನು ಹಾಕಿ ಕೊಡುತ್ತೀರಾ ಹೇಗೆ ?

ಶ್ರೀ ಎಂ.ವಿ. ಕೃಷ್ಣಪ್ಪ.—ಹಿಂದೆ ಯುದ್ಧ ಉಂಟಾದಾಗ ಗ್ರೋವೋರ್‌ಫುಡ್ ಸ್ಕೀಮ್ ಪ್ರಕಾರ ಕೊಡುತ್ತಿದ್ದರು. ಮದ್ರಾಸ್ ರಾಜ್ಯದಲ್ಲಿ ಪರಂಬು ಶಿವಾಜಮು ಕಲ್ಪವೇಷನ್ ಎಂದು ಕೊಡುತ್ತಿದ್ದರು. ಈಗ ಗ್ರೋವೊರ್ ಫುಡ್ ಸ್ಕೀಮ್ ಪ್ರಕಾರ ಪರ್ಮನೆಂಟಾಗಿ ಅಪ್‌ಸೆಟ್ ಪ್ರೈಸಿಗೆ ಎ ದರೆ ಒಂದು ಎಕರೆಗೆ 15-20 ರೂಪಾಯಿಗಳಂತೆ ಕೊಡುತ್ತೇವೆ.

Sri J. P. SARVESH.— You said Harijans will be punished. I want to bring to your notice that they are cultivating those lan ls for the p ist 15years. The only thing is patta is not granted to them. It is only in certain villages and not all the villages. In 3 or 4 villages standing crops are being grazed. Orders should be issued to the revenue authorities of the District that if they have cultivated wrongly, crops may be co.fiscated by the Government. But the villagers are grazing and unnecessrily creating trouble.

Sri M. V. KRISHNAPPA.—If such instances are brought to my notice, I will ask the revenue authorities to protect those farmers It is the Government which has to take action and not the local villagers. If a man has unauthorisedly cultivated lands Government will levy T. T. Fine and collect it and it s not the villagers that should take action. We will protect them.

Issue of Licences for starting new Rice Mills in South Kanara District from April 1960 to June 1962.

*Q.—235. Sri SANJEEVANATH AIKALA (Suratkal).—

Will the Government be pleased to state :—

(a) the number of applications received for the issue of licences to start new rice mills in the District of South Kanara from 1-4-1960 to 30-6-1962